**ಇಂದು ದಿನಾಂಕ:*09.10.2025* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : 5 ರಿಂದ 14 ನೇ ಪ್ರತಿವಾದಿಗಳ ಪರ ಶ್ರೀ.ಎಸ್.ಎಂ.ಪಿ. ವಕೀಲರಿಂದಃ**

ಪ್ರತಿವಾದಿಗಳು ತೊಂದರೆ ಕೊಡುತ್ತಿದ್ದಾರೆ ಎಂದು ವಾದಿ ನಿರ್ಬಂಧಕಾಜ್ಞೆಗಾಗಿ ಈ ಕೇಸು ಹಾಕಿದ್ದಾರೆ. 1 ರಿಂದ 4 ನೇ ಪ್ರತಿವಾದಿಗಳು ಗೌಡ ಜನಾಂಗಕ್ಕೆ ಸೇರಿದ್ದಾರೆ ಎಂದರೆ ಸರಿ. 5 ರಿಂದ 14 ನೇ ಪ್ರತಿವಾದಿಗಳು ಪರಿಶಿಷ್ಟ ಜನಾಂಗಕ್ಕೆ ಸೇರಿದ್ದಾರೆ ಎಂದರೆ ಸರಿ. ನಿ.ಪಿ–1 ರಲ್ಲಿರುವ ಎಲ್ಲಾ ಸಹಿಗಳನ್ನು ನಾನು ನ್ಯಾಯಾಲಯದಲ್ಲಿ ಹಾಕಿದ್ದೇನೆ. ನಿ.ಪಿ–1 ಕ್ಕೆ ನನ್ನ ತಂದೆ ನಮ್ಮ ವಕೀಲರಾದ ಶಿವಣ್ಣೇಗೌಡರ ಕಚೇರಿಯಲ್ಲಿ ಸಹಿ ಮಾಡಿದ್ದಾರೆ. ದಿನಾಂಕ 19.04.2024 ರವರೆಗೂ ನನ್ನ ತಂದೆ ನ್ಯಾಯಾಲಯಕ್ಕೆ ಬರುತ್ತಿದ್ದರು ಎಂದರೆ ಗೊತ್ತಿಲ್ಲ. ಸ.ನಂ.1ರ 1 ಎಕರೆ 15 ಗುಂಟೆ ವಿಸ್ತೀರ್ಣಕ್ಕೆ ನನ್ನ ತಂದೆ ಈ ಕೇಸು ಹಾಕಿದ್ದಾರೆ. ದಾವಾ ಆಸ್ತಿ ನನ್ನ ತಂದೆಗೆ ನನ್ನ ತಾತ ಕಾಳೇಗೌಡರಿಂದ ಪಿತ್ರಾರ್ಜಿತವಾಗಿ ಬಂದಿದೆ. ನನ್ನ ತಾತ ಎ.ಬಿ.ಬಸಪ್ಪಶೆಟ್ಟರವರಿಂದ 1972 ರಲ್ಲಿ ಖರೀದಿಸಿದ್ದರು, ದಿನಾಂಕ ಸರಿಯಾಗಿ ಗೊತ್ತಿಲ್ಲ. 1972 ರಲ್ಲಿ ಎ.ಬಿ.ಬಸಪ್ಪಶೆಟ್ಟರ ಹೆಸರಿನಲ್ಲಿತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ನನ್ನ ತಾತ ಎ.ಬಿ.ಬಸಪ್ಪಶೆಟ್ಟರವರಿಂದ 2 ಎಕರೆ 29 ಗುಂಟೆ ಖರೀದಿಸಿದ್ದರು. ಸದರಿ 2 ಎಕರೆ 29 ಗುಂಟೆ ವಿಸ್ತೀರ್ಣದ ಪೂರ್ವಕ್ಕೆ ಓಣಿ ಇದೆ ಎಂದರೆ ಸರ್ಕಾರಿ ರಸ್ತೆ ಇದೆ, ಪಶ್ಚಿಮಕ್ಕೆ ಸಣ್ಣಕಾಳೇಗೌಡರವರ ಜಮೀನು ಅದರ ಸ.ನಂ.1, ದಕ್ಷಿಣಕ್ಕೆ ಗೋಮಾಳ, ಉತ್ತರಕ್ಕೆ ಬೆಟ್ಟದಪುರ–ಕೆ.ಆರ್.ನಗರ ಮುಖ್ಯ ರಸ್ತೆ ಇರುತ್ತದೆ. ನಾಗನಹಳ್ಳಿ ಗ್ರಾಮದ ಸ.ನಂ.1 ರಲ್ಲಿ 7 ಎಕರೆ 29 ಗುಂಟೆ ಇದೆ. 7 ಎಕರೆ 29 ಗುಂಟೆ ಪೈಕಿ 2 ಎಕರೆ 29 ಗುಂಟೆ ಜಮೀನಿನ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಪಶ್ಚಿಮಕ್ಕೆ ವೀರಪ್ಪನವರ ಜಮೀನು, ದಕ್ಷಿಣಕ್ಕೆ ಗೋಮಾಳ ಮತ್ತು ಉತ್ತರಕ್ಕೆ ರಸ್ತೆ ಇರುತ್ತದೆ. ನನ್ನ ತಾತ ಖರೀದಿಸಿರುವ ಕ್ರಯ ಪತ್ರವನ್ನು ನೋಡಿದ್ದೇನೆ. ಸದರಿ ಕ್ರಯ

ಪತ್ರಕ್ಕೆ ಯಾರು ಯಾರು ಸಾಕ್ಷಿ ಹಾಕಿದ್ದಾರೆ ಎಂದು ನಾನು ನೋಡಿಲ್ಲ. ನಿ.ಪಿ-4 ರಲ್ಲಿ ಗುರುತಿಸಿರುವ ಕ್ರಯ ಪತ್ರವೆ ನನ್ನ ತಾತ ಕ್ರಯ ಮಾಡಿಕೊಂಡಿರುವುದಾಗಿದೆ. ಕ್ರಯ ಪತ್ರದ ಪ್ರಕಾರ ಪೂರ್ವಕ್ಕೆ ಸಾವಲಯ್ಯ ಮತ್ತು ವಗೈರೆ ರವರ ಜಮೀನು ಎಂದು ಇದೆ ಎಂದರೆ ಸರಿಯಲ್ಲ, ಪಶ್ಚಿಮಕ್ಕೆ ಅಜ್ಜ ವಗೈರೆರವರ ಜಮೀನು, ದಕ್ಷಿಣಕ್ಕೆ ಇನಾಮ್ ಜಮೀನು ಎಂದರೆ ಸರಿಯಲ್ಲ ಮತ್ತು ಉತ್ತರಕ್ಕೆ ರಸ್ತೆ ಇದೆ ಎಂದರೆ ಗೊತ್ತಿಲ್ಲ. ನಾನು ಹೇಳುತ್ತಿರುವಂತ ಚೆಕ್ಕುಬಂಧಿ ಕ್ರಯ ಪತ್ರದಲ್ಲಿರುವುದಿಲ್ಲ ಎಂದರೆ ನೀವು ಕೇಳುತ್ತಿರುವುದು 7 ಎಕರೆ 29 ಗುಂಟೆ ಜಮೀನಿಗೆ ಸಂಬಂಧಿಸಿದೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ನನ್ನ ಚಿಕ್ಕಪ್ಪ ಈ ಹಿಂದೆ ಯಾವುದೇ ಕೇಸು ಹಾಕಿರುವುದಿಲ್ಲ. ಸಾಕ್ಷಿಗೆ ಒಂದು ಪೋಟೊ ತೋರಿಸಿ ಅದರಲ್ಲಿ ಕಂಡು ಬರುವುದು 2 ಎಕರೆ 29 ಗುಂಟೆ ಜಮೀನಿಗೆ ಸಂಬಂಧಿಸಿದೆ ಎಂದು ಒಪ್ಪಿಕೊಂಡ ಮೇರೆಗೆ ಸದರಿ ಪೋಟೊವನ್ನು **ನಿ.ಡಿ-1** ಎಂದು ಗುರುತಿಸಲಾಯಿತು. ನಿ.ಡಿ-1 ರಲ್ಲಿ ಕಂಡು ಬರುವ ಮನೆ ಮತ್ತು ಅಡಿಕೆ ತೋಟ ನಮ್ಮದು. ದಾವಾ ಆಸ್ತಿಯಲ್ಲಿ ಅಡಿಕೆ ತೋಟ ಮತ್ತು ತೆಂಗಿನ ತೋಟ ಇರುವ ಬಗ್ಗೆ ವಾದ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಗೊತ್ತಿಲ್ಲ. ಆದ್ದರಿಂದ ವಾದ ಪತ್ರದಲ್ಲಿ ನಮ್ಮ ತಂದೆ ಏನು ಬರೆಸಿದ್ದಾರೆ ಎಂಬುದು ಗೊತ್ತಿಲ್ಲ ಎಂದರೆ ನಿರ್ಬಂಧಕಾಜ್ಞೆಗಾಗಿ ಹಾಕಿದ್ದಾರೆ. ಸಾಕ್ಷಿಗೆ ಮತ್ತೊಂದು ಪೋಟೊ ತೋರಿಸಿ ಅದರಲ್ಲಿ ಕಂಡು ಬರುವುದು ಸ.ನಂ.1 ಕ್ಕೆ ಸಂಬಂಧಿಸಿದೆ ಎಂದು ಒಪ್ಪಿಕೊಂಡ ಮೇರೆಗೆ ಸದರಿ ಪೋಟೊವನ್ನು **ನಿ.ಡಿ-2** ಎಂದು ಗುರುತಿಸಲಾಯಿತು. ನಿ.ಡಿ-2 ರಲ್ಲಿ ಕಂಡು ಬರುವ ಮನೆಗಳು ಯಾರಿಗೆ ಸೇರಿವೆ ಎಂದು ಗೊತ್ತಿಲ್ಲ. ಸದರಿ ಮನೆಗಳು 5 ರಿಂದ 14 ನೇ ಪ್ರತಿವಾದಿಗಳ ಮನೆಗಳು ಎಂದರೆ ಸುಳ್ಳು. ನಮ್ಮ ಮನೆಯ ನಂಬರ್ ಜ್ಞಾಪಕವಿಲ್ಲ. ನಿ.ಡಿ-1 ರಲ್ಲಿರುವ ಮನೆಯನ್ನು 2022 ರಲ್ಲಿ ಕಟ್ಟಿದ್ದೇವೆ. ನಿ.ಡಿ-1 ರಲ್ಲಿರುವ ಮನೆ ದಾವಾ ಆಸ್ತಿಯ ಉತ್ತರಕ್ಕೆ ಸೇರಿದಂತೆ ಇದೆ. ನಿ.ಡಿ-1 ರಲ್ಲಿರುವ ನಮ್ಮ

ಮನೆಯ ಪಕ್ಕದಲ್ಲಿರುವ ಬಾತ್ ರೂಮ್ ಕೂಡ ನಮಗೆ ಸೇರಿದ್ದು. ನಿ.ಡಿ-1 ರಲ್ಲಿರುವ ಮನೆಯನ್ನು ಕಟ್ಟಲು ಗ್ರಾಮ ಪಂಚಾಯಿತಿಯಿಂದ ಲೈಸೆನ್ಸ ಪಡೆದಿದ್ದೀರಾ ಎಂದರೆ ಗೊತ್ತಿಲ್ಲ. ನಮ್ಮ ಮನೆಗೆ ಬೋರೆಗೌಡರ ಹೆಸರಿನಲ್ಲಿ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದೇವೆ. ವಿದ್ಯುತ್ ಬಿಲ್ಲನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಮನೆಗೆ ನಲ್ಲಿ ಕನೆಕ್ಷನ್ ತೆಗೆದುಕೊಂಡಿಲ್ಲ ಬೋರ್ ವೆಲ್ ಇದೆ. ಮನೆಯಿಂದ ಪೂರ್ವ ದಿಕ್ಕಿನಲ್ಲಿ ಬೋರ್ ವೆಲ್ ಇದೆ. ಸದರಿ ಬೋರ್ ವೆಲ್ ಗೆ 2022 ರಲ್ಲಿ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದೇವೆ. ವಿದ್ಯುತ್ ಸಂಪರ್ಕ ಪಡೆದುಕೊಂಡಿರುವ ಬಗ್ಗೆ ಬಿಲ್ಲು ಹಾಜರುಪಡಿಸಿದ್ದೇನೆ. ನಿ.ಡಿ-1 ರಲ್ಲಿ ಗುರುತಿಸಿರುವ ಪೋಟೊದಲ್ಲಿ ಕಂಡು ಬರುವ ಆಲದ ಮರದ ಪಕ್ಕದಲ್ಲಿರುವ ಇನ್ನೊಂದು ಮನೆ ನಮಗೆ ಸೇರುವುದಿಲ್ಲ ನಮ್ಮ ಮನೆಯಿಂದ ಉತ್ತರ ದಿಕ್ಕಿನಲ್ಲಿರುವ ರಸ್ತೆಯಿಂದ ಆಚೆ ಇದೆ. ನಮ್ಮ ಜಮೀನಿನ ಉತ್ತರ ದಿಕ್ಕಿನಲ್ಲಿ ಆಲದ ಮರ ಇದೆ. ಆಲದ ಮರ ರಸ್ತೆಯಿಂದ ಆಚೆ ಇದೆ. ನಿ.ಡಿ-1 ರಲ್ಲಿ ರಸ್ತೆ ಇರುವುದು ಕಾಣಿಸುತ್ತಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅಡಿಕೆ ಮತ್ತು ತೆಂಗಿನ ಸಸಿಗಳನ್ನು ಹಾಕಿ 8-10 ವರ್ಷಗಳಾಗಿದೆ. ಅಡಿಕೆಯನ್ನು ಬ್ರೋಕರ್ ಗೆ ಮಾರಾಟ ಮಾಡುತ್ತಿದ್ದೇವೆ ಅವರ ಹೆಸರು ಗೊತ್ತಿಲ್ಲ. ನಿ.ಡಿ-1 ರಲ್ಲಿ ಬಾತ್ ರೂಮ್ ಇರುವುದಿಲ್ಲ ಆದರೆ ಅದರಲ್ಲಿ ಇರುವ ಮತ್ತೊಂದು ಮನೆ ಪ್ರತಿವಾದಿ 5 ರಿಂದ 14 ರವರ ಪೈಕಿ ಒಬ್ಬರಿಗೆ ಸೇರಿದೆ ಎಂದರೆ ಗೊತ್ತಿಲ್ಲ. ನಿ.ಡಿ-1 ರಲ್ಲಿ ಕಂಡು ಬರುವ ಆಲದ ಮರ ನಿ.ಡಿ-2 ರಲ್ಲಿಯೂ ಕಂಡು ಬರುತ್ತದೆ ಎಂದರೆ ಸರಿಯಲ್ಲ. ನಿ.ಡಿ-2 ರಲ್ಲಿ ಇರುವ ಮನೆ ಯಾರದ್ದು ಎಂದು ಗೊತ್ತಿಲ್ಲ. ನಿ.ಡಿ-2 ರಲ್ಲಿರುವ ಮನೆ ಸ.ನಂ.6 ರಲ್ಲಿದೆ. ನಮ್ಮ ಜಮೀನಿನ ಉತ್ತರ ದಿಕ್ಕಿಗೆ ಸ.ನಂ.6 ರ ಜಮೀನು ಇದೆ. ಸ.ನಂ.6 ರ ಜಮೀನು ಯಾರ ಹೆಸರಿನಲ್ಲಿದೆ ಎಂದರೆ ಗೊತ್ತಿಲ್ಲ. ಸ.ನಂ.6 ರ ಜಮೀನನ್ನು ಯಾರು ವ್ಯವಸಾಯ ಮಾಡುತ್ತಿದ್ದಾರೆ ಎಂದು ಗೊತ್ತಿಲ್ಲ. ನಿ.ಡಿ-2 ರಲ್ಲಿ ಕಂಡು ಬರುವ ಮನೆಗಳನ್ನು ನಾನು

ನೋಡಿಲ್ಲ. ನಿ.ಡಿ-2 ರ ತೆಂಗಿನ ಮರದ ಪಕ್ಕದಲ್ಲಿರುವ ಮನೆ 1 ನೇ ಪ್ರತಿವಾದಿಗೆ ಸೇರಿದೆ ಹಾಗೂ ಆಲದ ಮರದ ಪಕ್ಕದಲ್ಲಿರುವ ಮನೆಗಳು ಪ್ರತಿವಾದಿ 5 ರಿಂದ 14 ರವರಿಗೆ ಸೇರಿದೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಮನೆ ನಾಗನಹಳ್ಳಿ ಗ್ರಾಮದ ಸ.ನಂ.1 ರಲ್ಲಿ ಇದೆ ಎಂದರೆ ಸುಳ್ಳು. ನಿ.ಪಿ-6 ರಲ್ಲಿ ಗುರುತಿಸಿರುವ ಪೋಟೊಗಳನ್ನು ದಿನಾಂಕ 04.02.2014 ರಂದು ತೆಗೆಯಲಾಗಿದೆ.

ನಿ.ಪಿ-6 ರಲ್ಲಿ ಗುರುತಿಸಿರುವ ಪೋಟೊದಲ್ಲಿ ಕಂಡು ಬರುವ ತನ್ನ ತಂದೆಯನ್ನು ಸಾಕ್ಷಿಯು ಗುರುತಿಸಿದ ಮೇರೆಗೆ ಅವರ ತಂದೆಯ ಭಾವಚಿತ್ರವನ್ನು **ನಿ.ಪಿ-6(ಎ) ಮತ್ತು (ಬಿ)** ಎಂದು ಗುರುತಿಸಲಾಯಿತು. ನಿ.ಪಿ-6 ರಲ್ಲಿ ಗುರುತಿಸಿರುವ ಪೋಟೊಗಳನ್ನು ಸ.ನಂ.1 ರಲ್ಲಿ ತೆಗೆಯಲಾಗಿದೆ ಎಂದರೆ ಸರಿ.

ನಿ.ಪಿ-6 ರಲ್ಲಿ ಗುರುತಿಸಿರುವ ಪೋಟೊದಲ್ಲಿರುವ 14 ನೇ ಪ್ರತಿವಾದಿಯನ್ನು ಸಾಕ್ಷಿಯು ಗುರುತಿಸಿರುವುದರಿಂದ ಅವರ ಭಾವ ಚಿತ್ರವನ್ನು **ನಿ.ಪಿ-6(ಸಿ)** ಎಂದು ಗುರುತಿಸಲಾಯಿತು.

ನಿ.ಪಿ-6 ರಲ್ಲಿ ಗುರುತಿಸಿರುವ ಪೋಟೊದಲ್ಲಿರುವ ಮಾದಯ್ಯ ಎಂಬುವರ ಭಾವಚಿತ್ರವನ್ನು ಸಾಕ್ಷಿಯು ಗುರುತಿಸಿರುವುದರಿಂದ ಅವರ ಭಾವ ಚಿತ್ರವನ್ನು **ನಿ.ಪಿ-6(ಡಿ)** ಎಂದು ಗುರುತಿಸಲಾಯಿತು. ಸದರಿ ಮಾದಯ್ಯ ನಾಗನಹಳ್ಳಿಯ ಗ್ರಾಮ ಪಂಚಾಯಿತಿ ಸದಸ್ಯರು ಎಂದರೆ ಗೊತ್ತಿಲ್ಲ.

ನನ್ನ ತಾತ 2 ಎಕರೆ 29 ಗುಂಟೆಯನ್ನು ಎ.ಬಿ.ಬಸಪ್ಪಶೆಟ್ಟಿರವರಿಂದ ಖರೀದಿಸಿದಾಗ 7 ಎಕರೆ 29 ಗುಂಟೆ ಎ.ಬಿ.ಬಸಪ್ಪಶೆಟ್ಟಿರವರ ಹೆಸರಿನಲ್ಲಿತ್ತು ಎಂದರೆ ಗೊತ್ತಿಲ್ಲ. ಸ.ನಂ.1 ರಲ್ಲಿ 2 ಎಕರೆ 29 ಗುಂಟೆ ಹೊರತುಪಡಿಸಿ ಉಳಿದ ವಿಸ್ತೀರ್ಣದಲ್ಲಿ ಯಾರು ಸ್ವಾಧೀನವಿದ್ದಾರೆ ಎಂದರೆ ಗೊತ್ತಿಲ್ಲ. ಉಳಿಕೆ ಜಮೀನು ನಮ್ಮ ಜಮೀನಿನಿಂದ ಪಶ್ಚಿಮ ದಿಕ್ಕಿಗೆ ಬರುತ್ತದೆ. ನನ್ನ ವಾದ ಪತ್ರದ ಪ್ರಕಾರ

ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ಸಣ್ಣಕಾಳೇಗೌಡರ ಜಮೀನು ಎಂದು ಬರೆಸಿದ್ದೇನೆ ಎಂದರೆ ಸರಿ. ಅವರ ಜಮೀನಿನ ಪಶ್ಚಿಮ ದಿಕ್ಕಿಗೆ ವೀರಪ್ಪಚನ್ನವೀರಯ್ಯರವರ ಜಮೀನು ಬರುತ್ತದೆ. ಅವರಿಬ್ಬರು ಅಪ್ಪ ಮಕ್ಕಳು. ಅದರ ಸರ್ವೆ ನಂಬರ್ ಗೊತ್ತಿಲ್ಲ. ನನ್ನ ತಾತ 2 ಎಕರೆ 29 ಗುಂಟೆ ಖರೀದಿಸಿದ ನಂತರ ಉಳಿಕೆ ಜಮೀನು ಯಾರ ಹೆಸರಿನಲ್ಲಿದೆ ಎಂದು ಗೊತ್ತಿಲ್ಲ. ನನ್ನ ಮನೆಯ ಪೂರ್ವ–ಪಶ್ಚಿಮ ಮತ್ತು ಉತ್ತರ–ದಕ್ಷಿಣವಾಗಿ ಎಷ್ಟು ಅಡಿ ಇದೆ ಎಂದು ಗೊತ್ತಿಲ್ಲ. 2 ಎಕರೆ 29 ಗುಂಟೆ ಜಮೀನನ್ನು ನನ್ನ ತಂದೆ ಮತ್ತು ಚಿಕ್ಕಪ್ಪ ಹಗ್ಗದಿಂದ ಅಳತೆ ಮಾಡಿ ಹಂಚಿಕೊಂಡಿದ್ದಾರೆ. ಆ ರೀತಿ ಹಂಚಿಕೊಂಡ ನಂತರ ನನ್ನ ತಂದೆಗೆ ಯಾವ ಇಸವಿಯಲ್ಲಿ ಖಾತೆಯಾಯಿತು ಎಂದು ಗೊತ್ತಿಲ್ಲ. ಕ್ರಯ ಪತ್ರದ ಮೂಲಕ ನನ್ನ ತಂದೆಯ ಹೆಸರಿಗೆ ಖಾತೆಯಾಗಿದೆ. ಎಂ.ಆರ್ ನಂಬರ್ ಗೊತ್ತಿಲ್ಲ ಮತ್ತು ಯಾರ ವರ್ಷದಲ್ಲಿ ಎಂ.ಆರ್ ಆಗಿದೆ ಎಂದು ಗೊತ್ತಿಲ್ಲ. ನನ್ನ ತಾತ ಖರೀದಿಸಿದ ನಂತರ ನನ್ನ ತಂದೆಯ ಹೆಸರಿಗೆ ಖಾತೆಯಾಗುವ ತನಕ ದಾವಾ ಆಸ್ತಿ ಕಾಳೇಗೌಡ ಬಿನ್ ಕುಳ್ಳೇಗೌಡರ ಹೆಸರಿನಲ್ಲಿತ್ತು. ಅವರ ಹೆಸರಿನಲ್ಲಿದ್ದ ರೆವಿನ್ಯೂ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ದಾವಾ ಆಸ್ತಿಯನ್ನು ನನ್ನ ತಂದೆ ಅಥವಾ ಚಿಕ್ಕಪ್ಪ ಸರ್ವೆ ಮಾಡಿಸಿದ್ದಾರೆಯೇ ಗೊತ್ತಿಲ್ಲ. ಇನ್ನು 1 ಎಕರೆ 14 ಗುಂಟೆ ನನ್ನ ಚಿಕ್ಕಪ್ಪನಾದ ಸಣ್ಣಕಾಳೇಗೌಡ ಬಿನ್ ಕಾಳೇಗೌಡರ ಹೆಸರಿನಲ್ಲಿದೆ. ನನ್ನ ಚಿಕ್ಕಪ್ಪ 1 ಎಕರೆ 14 ಗುಂಟೆಯಲ್ಲಿ ಸ್ವಾಧೀನವಿದ್ದಾರೆ. ಅದರ ಚೆಕ್ಕುಬಂಧಿ ಹೇಳಲು ಗೊತ್ತಿಲ್ಲ.

**ಮುಂದುವರಿದ ಪಾಟೀ ಸವಾಲು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***
**ಪಿರಿಯಾಪಟ್ಟಣ**